2015 ಕ.ತೀ.ವ 512

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ

ಐನಂದ ಕೆ. ಚಿನ್ನಪ್ಪ ಮತ್ತು ಇತರರು –ವಿರುದ್ಧ– ಬಾಲಚಂದ ಎಂ. ತಮ್ಮಯ್ಯ ಮತ್ತು ಮತ್ತೊಬ್ಬರು*

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ 1973– ಸೆಕ್ಷನ್ 397

ವಿರಾಜಪೇಟೆ ತಾಲೂಕಿನ ಯಡೂರ ಗ್ರಾಮದ ಸರ್ವೆ ನಂ. 63/1 ಮತ್ತು 60/1ರ ನಡುವೆ ಸುಮಾರು ಜಮೀನುಗಳನ್ನು ಹಾದುಹೋಗಲು ಮತ್ತು ದನಕರುಗಳು ಹಾಗು ಬಂಡಿಗಾಡಿಗಳು ಇತ್ಯಾದಿ ಓಡಾಡಲು 'ಕಡಂಗ' ವೆಂದು ಕರೆಯಲಾಗುವ ಕಾಲುದಾರಿ ಇತ್ತೆಂದು ಈ ಅಪೀಲಿನಲ್ಲಿನ ಅರ್ಜಿದಾರರು ಅದನ್ನು ಒತ್ತುವರಿ ಮಾಡಿಕೊಂಡು ಬೇಲಿ ಹಾಕಿದ್ದಾರೆಂಬ ಪ್ರತ್ಯರ್ಜಿದಾರನ ವಾದವನ್ನು ಎತ್ತಿಹಿಡಿದು ಉಪವಿಭಾಗಾಧಿಕಾರಿಯ ಅಭಿಪ್ರಾಯವನ್ನು ತಳ್ಳಿಹಾಕಿದ್ದ ಅಧೀನ ನ್ಯಾಯಾಲಯದ ತೀರ್ಪನ್ನು ಇಲ್ಲಿನ ಅಪೀಲಿನಲ್ಲಿ ಪ್ರಶ್ನಿಸಲಾಗಿದೆ.

ಪ್ರಸ್ತುತ ಅಪೀಲಿನಲ್ಲಿ ಯಾವುದೇ ಸಾರ್ವಜನಿಕ ಹಿತಾಸಕ್ತಿ ಇಲ್ಲವೆಂದು ಹಾಗೂ ಇದು ಪ್ರತ್ಯರ್ಜಿದಾರರ ವೈಯಕ್ತಿಕ ಕ್ಲೇಮಾಗಿದ್ದು, ಗ್ರಾಮದ ಇತರರೂ ಸಹಾ ಕಡಂಗವನ್ನು ಬಳಸುತ್ತಿದ್ದರೆಂದು ಪ್ರಾಸಂಗಿಕವಾಗಿ ಹೇಳುವಾಗ, ವಿಭಾಗಾಧಿಕಾರಿಯುವರು ತೆಗೆದುಕೊಂಡ ನಿರ್ಣಯವನ್ನು ಪರಿಗಣಿಸಿದಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 1973ರ 133ನೇ ಪ್ರಕರಣವನ್ನು ಪ್ರತ್ಯರ್ಜಿದಾರರ ವೈಯಕ್ತಿಕ ಸ್ವರೂಪದ ಪ್ರಕರಣವನ್ನು ಸುಸ್ಥಾಪಿಸಲು ಕೋರಲಾಗಿದೆಯೆಂದು ಹೇಳಲಾಗುವುದಿಲ್ಲ.

ಪ್ರತ್ಯರ್ಜಿದಾರನು ಕಡಂಗದ ಮೂಲಕ ಹಾದುಹೋಗುವ ದಾರಿಯ ಹಕ್ಕನ್ನು ಚಲಾಯಿಸಲು ಕೋರಿದ್ದಲ್ಲಿ, ಅವನು ಅಂಥ ಹಕ್ಕಿಗೆ ಸಂಬಂಧಿಸಿದ ಘೋಷಣೆಯನ್ನು ಕೋರುವಲ್ಲಿ, ರಾಜ್ಯ ಸರ್ಕಾರದ ಹಾಗೂ ಈಗಿನ ಅರ್ಜಿದಾರರ ವಿರುದ್ಧ ಸೂಕ್ತ ವ್ಯವಹರಣೆಗಳನ್ನು ದಾಖಲಿಸುವ ಅಗತ್ಯತೆಯಿದೆ. ಆದುದರಿಂದ ಅರ್ಜಿದಾರರ

*ಕ್ರಿಮಿನಲ್ ಆರ್.ಪಿ. ಸಂಖ್ಯೆ 93/2006, ದಿನಾಂಕ: 12ನೇ ಸೆಪ್ಟೆಂಬರ್, 2014.

**ಭೂಮಿಯ ಎರಡು ಬಾಬ್ತುಗಳ ನಡುವೆ ಇರುವ ಕಡಂಗವು ಸಾರ್ವಜನಿಕ ದಾರಿ ಮತ್ತು ವಾಹನಗಳು ಚಲಿಸುವ ರಸ್ತೆ ಎಂಬ ಕೆಳಗಿನ (ಅಧೀನ) ನ್ಯಾಯಾಲಯದ ನಿರ್ಣಯವು, ಅಸಿಸ್ಟೆಂಟ್ ಕಮೀಷನರ್‌ರು ನಡೆಸಿದ ಸ್ಥಳ ಪರಿಶೀಲನೆಯ ಆಧಾರದ ಮೇಲೆ ಕೈಗೊಂಡ, ವಾಸ್ತವ ಸಂಗತಿಯ ನಿರ್ಣಯಗಳಿಗೆ ನಿಶ್ಚಿತವಾಗಿ ವಿರುದ್ಧವಾಗಿದೆ ಎಂದು ಅಭಿಪ್ರಾಯಪಟ್ಟು ಅಪೀಲನ್ನು ಪುರಸ್ಕರಿಸಿದೆ. (ಪ್ಯಾರಾ–9)**

ಅಪೀಲುದಾರರ ಪರ : ಶ್ರೀ ಎನ್. ರವೀಂದ್ರನಾಥ್ ಕಾಮತ್ – ವಕೀಲರು;
2ನೇ ಪ್ರತ್ಯರ್ಜಿದಾರರ ಪರ : ಶ್ರೀ ಕೆ.ಆರ್. ಕೇಶವ ಮೂರ್ತಿ – ಎಸ್.ಪಿ.ಪಿ.,
1ನೇ ಪ್ರತ್ಯರ್ಜಿದಾರರ ಪರ : ಶ್ರೀ ಎಸ್.ಜಿ.ರಾಜೇಂದ್ರ ರೆಡ್ಡಿ – ವಕೀಲರು (ಗೈರುಹಾಜರು)

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ:**

ಅರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರ ವಾದಗಳನ್ನು ಆಲಿಸಲಾಗಿದೆ.

2. ವಿಷಯವನ್ನು ಹಲವಾರು ಸಂದರ್ಭಗಳಲ್ಲಿ ಸುನಾವಣೆ ಮಾಡಲಾಗಿದ್ದರೂ ಸಹ ಪ್ರತ್ಯರ್ಜಿದಾರನ ಪರ ಮಾನ್ಯ ವಕೀಲರು ಗೈರುಹಾಜರಾಗಿರುತ್ತಾರೆ ಮತ್ತು ಸದರಿ ವಿಷಯವನ್ನು ನ್ಯಾಯಾಲಯದ ಮುಂದೆ ಹಾಜರಾಗುವ ಪ್ರತ್ಯರ್ಜಿದಾರನ ಪರ ಮಾನ್ಯ ವಕೀಲರ ನಿರೀಕ್ಷೆಯಲ್ಲಿ ಮುಂದೂಡಲಾಗಿದ್ದು, ಅವರು ಹಾಜರಾಗಲು ವಿಫಲರಾಗಿದ್ದಾರೆ.

3. ಮಾನ್ಯ ರಾಜ್ಯ ಸರ್ಕಾರಿ ಪ್ರಾಸಿಕ್ಯೂಟರ್ (ಎಸ್.ಪಿ.ಪಿ.)ಯವರ ವಾದವನ್ನು ಸಹ ಆಲಿಸಲಾಯಿತು.

4. ಪ್ರಕರಣದ ಸಂಕ್ಷಿಪ್ತ ಸಂಗತಿಗಳು ಈ ಮುಂದಿನಂತಿವೆ :

ಇದರಲ್ಲಿ ಮೊದಲನೇ ಪ್ರತ್ಯರ್ಜಿದಾರನು, ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ, ಯಡೂರು ಗ್ರಾಮದ 63/1 ಮತ್ತು 60/1 ಸರ್ವೆ ನಂಬರುಗಳನ್ನು ಹೊಂದಿರುವ ಜಮೀನುಗಳ ನಡುವೆ ಇರುವ ಖಾಲಿ ಜಾಗಕ್ಕೆ (ಫ್ರೀ ಪ್ಯಾಸೇಜ್) ಸಂಬಂಧಿಸಿದಂತೆ, ಅರ್ಜಿದಾರರು ಅಡ್ಡಿಪಡಿಸುತ್ತಿದ್ದರೆಂದು ಕ್ಲೇಮು ಮಾಡಿ, ದಂಡ ಪ್ರಕ್ರಿಯಾ ಸಂಹಿತೆ, 1973ರ (ಇನ್ನು ಮುಂದೆ ಸಂಕ್ಷಿಪ್ತವಾಗಿ ''ಸಿ.ಆರ್.ಪಿ.ಸಿ'' ಎಂದು ಕರೆಯಲಾಗುತ್ತದೆ) ಪ್ರಕರಣ 133ರ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದಾನೆಂದು ಹೇಳಲಾಗಿದೆ. ಪ್ರತ್ಯರ್ಜಿದಾರ ಸಂಖ್ಯೆ–1 ತಾನು ಸ್ಥಿರಸ್ವತ್ತುಗಳನ್ನು ಹೊಂದಿದ್ದಾನೆಂದು; ತಾನು ಕಾಫಿ ಮತ್ತು ಇತರ ಬೆಳೆಗಳನ್ನು ಬೆಳೆಯುತ್ತಾನೆಂದೂ ಮತ್ತು ಯಡೂರು ಗ್ರಾಮದಲ್ಲಿ ತಾನು ವಾಸಿಸುವ ಮನೆಯಿದೆಯೆಂದೂ ಹಾಗೂ ಸರ್ವೆ ನಂ. 71/1ನ್ನು ಹೊಂದಿರುವ ತನ್ನ ಜಮೀನನ್ನು ಹಾಗೂ ಅಕ್ಕಪಕ್ಕದ ಸರ್ವೆ ನಂಬರುಗಳನ್ನು ಹೊಂದಿರುವ ಇತರ ಜಮೀನುಗಳನ್ನು ತಲುಪಲು, ಯಡೂರು ಗ್ರಾಮದ 63/1 ಮತ್ತು 60/1 ಸರ್ವೆ ನಂಬರುಗಳನ್ನು ಹೊಂದಿರುವ ಜಮೀನುಗಳ ನಡುವೆ ಇರುವ 'ಕಡಂಗ'ವನ್ನು ಅರ್ಜಿದಾರರು ಬಳಸುತ್ತಿದ್ದರೆಂದು ಕ್ಲೇಮು ಮಾಡುತ್ತಾನೆ. ಕಡಂಗವು ಸರ್ಕಾರಕ್ಕೆ ಸೇರಿರುವ ಜಮೀನೆಂದು ಮತ್ತು ಇದು ಯಡೂರು ಗ್ರಾಮದ ಮುಖಾಂತರ ಕನ್ನಂಗಲ ಗ್ರಾಮದಿಂದ ಹಾದುಹೋಗಿ ಹಚಿನಾಡು ಗ್ರಾಮವನ್ನು ತಲುಪುತ್ತದೆಯೆಂದು ಪ್ರತ್ಯರ್ಜಿದಾರ ಕ್ಲೇಮು ಮಾಡಿದ್ದಾನೆ ಮತ್ತು ಈ ಕಡಂಗವು ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿತ್ತೆಂದು ಹೇಳಲಾಗುತ್ತದೆ ಹಾಗೂ ಇದು ಮೋಟಾರು ವಾಹನಗಳು ಓಡಾಡುವ ಕಡಂಗವಾಗಿದ್ದು, ಅದರ ಮೇಲೆ ವಾಹನಗಳು ಚಲಿಸುತ್ತವೆ. ಕಡಂಗದ ಅಗಲವು ಸುಮಾರು 20 x 22 ಅಡಿ ಎಂದು ಹೇಳಲಾಗುತ್ತದೆ. ಅಷ್ಟೇಅಲ್ಲದೆ, ಪ್ರತ್ಯರ್ಜಿದಾರ ಸಂಖ್ಯೆ–1 ತನ್ನ ಕಾಫಿ ಎಸ್ಟೇಟಿಗೆ ತಲುಪಲು ಮತ್ತು ಸರ್ವೆ ನಂ. 62ನ್ನು ಹೊಂದಿರುವ ಜಮೀನಿನಲ್ಲಿ ಇರುವ ದೇವರಕಾಡು ಪ್ರದೇಶಕ್ಕೆ ತನ್ನ ದನಗಳನ್ನು ಕರೆದೊಯ್ಯಲು ಹಾಗೂ ಇತರ ಉದ್ದೇಶಗಳಿಗಾಗಿ ಸಹ ಈ ಕಡಂಗವನ್ನು ತಾನು ಬಳಸುತ್ತಿದ್ದೆನೆಂದು ಕ್ಲೇಮು ಮಾಡಿದ್ದಾನೆ. ಅಷ್ಟೇಅಲ್ಲದೆ, ಪ್ರತ್ಯರ್ಜಿದಾರ–1 ಮತ್ತು ಇತರ ಗ್ರಾಮಸ್ಥರು ಕಡಂಗವನ್ನು ನಿರ್ವಹಿಸುತ್ತಿದ್ದರೆಂದು ಹೇಳಲಾಗಿದೆ. ಅರ್ಜಿದಾರನನ್ನು ಹೊರತುಪಡಿಸಿ, ಗ್ರಾಮದ ಇತರರು ಸಹ ಅಯ್ಯಪ್ಪ ದೇವರ ಕೆರೆ ಎಂದು ಕರೆಯಲಾದ ಸರ್ವೆ

ನಂ. 61ರಲ್ಲಿ ಇರುವ ಕೆರೆಯನ್ನು ತಲುಪಲು ಮತ್ತು ಭದ್ರಕಾಳಿ ದೇವರ ಕಾಡು ಎಂದು ಹೆಸರಾದ ಮೀಸಲು ಅರಣ್ಯ ಪ್ರದೇಶವಾದ ಸರ್ವೆ ನಂ. 62ನ್ನು ಹೊಂದಿರುವ ಜಮೀನನ್ನು ತಲುಪಲು ಸಹ ಇದನ್ನೇ ಬಳಸುತ್ತಾರೆಂದು ಹೇಳಲಾಗಿದೆ. ಅಲ್ಲೊಂದು ದೇವಾಲಯವಿರುವುದಾಗಿಯೂ, ಅಲ್ಲಿ ಗ್ರಾಮಸ್ಥರು ಪ್ರತಿ ತಿಂಗಳು ಪೂಜೆ ಸಲ್ಲಿಸುತ್ತಾರೆಂದೂ ಮತ್ತು ಆ ಕಾರಣದಿಂದ, ಕಡಂಗವು ಪ್ರತ್ಯರ್ಜಿದಾರ ಮತ್ತು ಗ್ರಾಮದ ಇತರರು ಬಳಸುವ ಕಾಲುದಾರಿಯೂ ಆಗಿದೆಯೆಂದು ಹೇಳಲಾಗಿದೆ.

5. ಈ ಹಿನ್ನೆಲೆಯಲ್ಲಿ, ಯಡೂರು ಗ್ರಾಮದ 63/1 ಮತ್ತು 60/1 ಸರ್ವೆ ನಂಬರುಗಳನ್ನು ಹೊಂದಿರುವ ಜಮೀನಿನ ಹಾಗೂ ಈ ಎರಡು ಜಮೀನುಗಳ ನಡುವೆ ಇದ್ದು, ಜಮೀನುಗಳ ಎರಡು ಬಾಬ್ತುಗಳ ನಡುವೆ ಹಾದುಹೋಗುವ ಕಡಂಗದ ಮಾಲೀಕರು ಸುಮಾರು 5 ಅಡಿ ಎತ್ತರದ ಬೇಲಿಯನ್ನು ನಿರ್ಮಿಸಿ, ಜನರ ಓಡಾಟ ಮತ್ತು ಸರಕು ಸಾಮಗ್ರಿಗಳ ಸಾಗಣೆಯನ್ನು ಅಡ್ಡಿಪಡಿಸಿದ್ದಾರೆ ಮತ್ತು ತಡೆದಿದ್ದಾರೆ ಹಾಗೂ ಸರ್ಕಾರದ ಸ್ವತ್ತಾದ ಸದರಿ ಕಡಂಗದ ಮೇಲೆ ಅವರು ಯಾವುದೇ ಪ್ರತ್ಯೇಕವಾದ ಹಕ್ಕನ್ನು ಹೊಂದಿರುವುದಿಲ್ಲ. ಸದರಿ ಅಡೆತಡೆಯು 1994ರಿಂದ ಪ್ರಾರಂಭವಾಗಿದ್ದು, ಇದು ನಿರ್ದಿಷ್ಟವಾಗಿ ಪ್ರತ್ಯರ್ಜಿದಾರ ಮತ್ತು ಅವನ ಕುಟುಂಬವು ಅದನ್ನು ಬಳಸುವುದನ್ನು ತಡೆಯುತ್ತದೆಯೆಂದು ಈಗಿನ ಅರ್ಜಿದಾರರು ಕ್ಲೇಮು ಮಾಡುತ್ತಿದ್ದರೆಂದು ಆಪಾದಿಸಲಾಯಿತು. ಅರ್ಜಿದಾರರು ಅರ್ಜಿಯನ್ನು ಸಲ್ಲಿಸಿದ್ದು, ಕಡಂಗವು ಸಾರ್ವಜನಿಕ ಸ್ವತ್ತಲ್ಲವೆಂದು ಮತ್ತು ಹೆಚ್ಚಿನಕಾಲ ಅದು ಅರ್ಜಿದಾರರ ಜಮೀನುಗಳೊಂದಿಗೆ ವಿಲೀನವಾಗಿದೆ ಮತ್ತು 50ಕ್ಕೂ ಹೆಚ್ಚು ವರ್ಷಗಳಿಂದ ಅರ್ಜಿದಾರರ ಪ್ರತ್ಯೇಕ ಸ್ವಾಧೀನ ಹಾಗೂ ಅನುಭೋಗದಲ್ಲಿದೆಯೆಂದು ವಾದಿಸಿ ಆಕ್ಷೇಪಣೆಗಳನ್ನು ಸಲ್ಲಿಸಿದ್ದರು. ಮೊದಲ ಪ್ರತ್ಯರ್ಜಿದಾರನ ಸ್ವತ್ತಿಗೆ ತಲುಪಲು ಪ್ರತ್ಯೇಕವಾಗಿ ಹೋಗುವ ಬೇರೆ ದಾರಿಯಿದೆ. ಆ ಕಾರಣದಿಂದ, ಕಡಂಗವು ಅವನ ಸ್ವತ್ತಿಗೆ ಹೋಗಲು ಇರುವ ಒಂದೇ ದಾರಿ ಎಂಬ ವಾದವು ತಪ್ಪುದಾರಿಗೆಳೆಯುವ ಮತ್ತು ಕಿಡಿಗೇಡಿತನದ ಹೇಳಿಕೆಯಾಗಿದೆ. ಪ್ರತ್ಯರ್ಜಿದಾರನು ಉದ್ದೇಶಿಸಿದಂತೆ ಬೇಲಿಯನ್ನು ತೆಗೆದುಹಾಕುವುದರಿಂದ, ಅರ್ಜಿದಾರನ ಕಾಫಿ ಎಸ್ಟೇಟಿನ ಭದ್ರತೆಗೆ ಧಕ್ಕೆಯುಂಟಾಗುತ್ತದೆ ಮತ್ತು ದನಗಳಿಗೆ ಮತ್ತು ಇತರ ಕಿಡಿಗೇಡಿಗಳಿಗೆ ಜಮೀನನ್ನು

ತೆರೆದಿಟ್ಟಂತಾಗುತ್ತದೆ. ಇದು ಅರ್ಜಿದಾರರ ಪರವಾಗಿರುವುದಿಲ್ಲ. ಈ ಮೇಲಿನದರ ಹಿನ್ನೆಲೆಯಲ್ಲಿ, ತಹಸೀಲ್ದಾರರು ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್‌ರವರು, ವಿವಾದಿತ ಪ್ರದೇಶವನ್ನು ಸರ್ವೆ ಮಾಡಲು ತಾಲ್ಲೂಕು ಸರ್ವೇಯರ್‌ನನ್ನು ನೇಮಿಸಿರುತ್ತಾರೆ. ಹಾಗಿದ್ದರೂ ತಾಲ್ಲೂಕು ಸರ್ವೆಯರ್‌ನ ಇತರ ಕೆಲಸಕಾರ್ಯಗಳ ಕಾರಣದಿಂದಾಗಿ ಈ ಸರ್ವೆ ಕಾರ್ಯವನ್ನು ಪೂರ್ಣಗೊಳಿಸಲಾಗಿರುವುದಿಲ್ಲ. 1994ರ ವರ್ಷದಲ್ಲಿ ಪ್ರತ್ಯರ್ಜಿದಾರ ಸಂಖ್ಯೆ–1 ರಿಂದ ಆದ ಹಸ್ತಕ್ಷೇಪದ ಬಗ್ಗೆ ಪೊಲೀಸರಿಗೆ ದೂರು ನೀಡಲು ಅರ್ಜಿದಾರರು ನಿರ್ಬಂಧಕ್ಕೊಳಗಾಗಿದ್ದಾರೆಂದು ಮತ್ತು ಪ್ರತ್ಯರ್ಜಿದಾರ ಸಂಖ್ಯೆ–1 ಇತರ ಸಮಾಜ ವಿರೋಧಿ ಅಂಶಗಳೊಂದಿಗೆ, ಸ್ವತ್ತನ್ನು ಒತ್ತುವರಿ ಮಾಡಿಕೊಳ್ಳಲು ಮತ್ತು ಅರ್ಜಿದಾರರ ಸ್ವತ್ತನ್ನು ರಕ್ಷಿಸುವ ಬೇಲಿಯನ್ನು ಬಲವಂತವಾಗಿ ತೆಗೆದುಹಾಕಲು ಪ್ರಯತ್ನಿಸುತ್ತಿದ್ದರೆಂದು ತಿಳಿದುಬರುತ್ತದೆ. ಈ ಹಿನ್ನೆಲೆಯಲ್ಲಿ ಪ್ರತ್ಯರ್ಜಿದಾರ ಮತ್ತು ಅವನ ತಂದೆಯ ವಿರುದ್ಧ ಹೆಚ್ಚುವರಿ ಮುನ್ಸೀಫ್ ಮತ್ತು ಜೆ.ಎಂ.ಎಫ್.ಸಿ., ವಿರಾಜಪೇಟೆ ಇಲ್ಲಿನ ಕಡತದ ಮೇಲೆ ನಿರ್ಬಂಧಕಾಜ್ಞೆಗಾಗಿ ಓ.ಎಸ್.ಸಂಖ್ಯೆ 36/1994ರಲ್ಲಿ ದಾವೆಯನ್ನು ಹೂಡಲಾಯಿತು ಮತ್ತು ದಾವೆಯ ಸ್ವತ್ತಿಗೆ ಹಸ್ತಕ್ಷೇಪ ಮಾಡುವುದರಿಂದ ಪ್ರತ್ಯರ್ಜಿದಾರ ಸಂಖ್ಯೆ–1ನನ್ನು ತಡೆಯುವ, ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವ ಆದೇಶ ನೀಡಲಾಗಿತ್ತು. ಆ ಹಿನ್ನೆಲೆಯಲ್ಲಿ, ಮೊದಲನೇ ಪ್ರತ್ಯರ್ಜಿದಾರನ ಪರವಾಗಿ ಪರಿಗಣಿಸಿದ ಯಾವುದೇ ಪರಿಹಾರವು ಸ್ವತ್ತಿನಲ್ಲಿನ ಅವನ ಹಿತಾಸಕ್ತಿಯನ್ನು ಗಂಭೀರವಾಗಿ ವಿಪತ್ತುಗೊಳಪಡಿಸುವುದು ಮತ್ತು ಅರ್ಜಿಯು ಕಾನೂನುವ್ಯಾಪ್ತಿಗೆ ಬರುವುದಿಲ್ಲ ಹಾಗೂ ಪಕ್ಷಕಾರರ ಖಾಸಗಿ ಹಕ್ಕುಗಳನ್ನು ನಿರ್ಧರಿಸಲು ಅರ್ಜಿಯನ್ನು ದಾಖಲಿಸಲಾಗದು ಎಂದು ಅರ್ಜಿದಾರರು ವಾದಿಸಿದ್ದಾರೆ.

6. ಅಸಿಸ್ಟೆಂಟ್ ಕಮೀಷನರ್‌ರವರು ಅರ್ಜಿಯನ್ನು ಸುನಾವಣೆ ಮಾಡಿ ಮತ್ತು ಪ್ರತ್ಯರ್ಜಿದಾರ ಸಂಖ್ಯೆ–1ರ ಪರವಾಗಿ ಮೂವರು ಸಾಕ್ಷಿದಾರರ ಮತ್ತು ಅರ್ಜಿದಾರರ ಪರವಾಗಿ ಒಬ್ಬ ಸಾಕ್ಷಿದಾರನ ಸಾಕ್ಷ್ಯವನ್ನು ದಾಖಲಿಸಿದ ನಂತರ ಹಾಗೂ ಪಕ್ಷಕಾರರ ಪರ ಹಾಜರಾದ ಮಾನ್ಯ ವಕೀಲರ ವಾದಗಳನ್ನು ಆಲಿಸಿದ ನಂತರ ಹಾಗೂ ದಾಖಲೆಯಲ್ಲಿ ಮಂಡಿಸಿದ ವಿಷಯ ಸಾಮಗ್ರಿಯನ್ನು ಪರಿಶೀಲಿಸಿ, ತಮ್ಮ ದಿನಾಂಕ

16.10.1998ರ ಮೂಲಕ, ಪ್ರತ್ಯರ್ಜಿದಾರ ಅಥವಾ ಯಾರೇ ಇತರರಿಂದ ಕಡಂಗದ ಅಂಥ ಬಳಕೆಯ ಯಾವುದೇ ಸೂಚನೆ ಕಂಡುಬಂದಿಲ್ಲವೆಂದು ಅಭಿಪ್ರಾಯಪಟ್ಟು ಅರ್ಜಿಯನ್ನು ವಜಾಗೊಳಿಸಿದ್ದಾರೆ ಹಾಗೂ ತದನುಸಾರವಾಗಿ ಈಗಿನ ಅರ್ಜಿದಾರನ ಪರವಾಗಿ ತೀರ್ಮಾನಿಸಿದ್ದಾರೆ. ಆ ಆದೇಶವನ್ನು ಜಿಲ್ಲಾ ನ್ಯಾಯಾಧೀಶರ ಮುಂದೆ ಪುನರೀಕ್ಷಣಾ ಅರ್ಜಿಯ ಮೂಲಕ ಪ್ರಶ್ನಿಸಲಾಗಿದ್ದು, ವಿಷಯವು ಮತ್ತೆ ತಕರಾರಿಗೊಳಗಾಗಿದೆ. ಅದಕ್ಕೆ ಪ್ರತಿಯಾಗಿ ಪುನರೀಕ್ಷಣಾ ನ್ಯಾಯಾಲಯವು ಅಸಿಸ್ಟೆಂಟ್ ಕಮೀಷನರ್ ಆದೇಶವನ್ನು ತಳ್ಳಿಹಾಕಿದೆ ಮತ್ತು ಜನರು ಹಾಗೂ ವಾಹನಗಳ ಮುಕ್ತ ಓಡಾಟವನ್ನು ಸಾಧ್ಯಗೊಳಿಸಲು ಕೊಡಗು ಜಿಲ್ಲೆಯಲ್ಲಿನ ಯಡೂರು ಗ್ರಾಮದ 60/1 ಹಾಗೂ 63/2 ಸರ್ವೆ ನಂಬುರಗಳನ್ನು ಹೊಂದಿರುವ ಜಮೀನಿನ ನಡುವೆ ಇರುವ ಕಡಂಗಕ್ಕೆ ಈಗಿನ ಅರ್ಜಿದಾರರು ಉಂಟು ಮಾಡಿರುವ ಅಡಚಣೆಯನ್ನು ಉಪವಿಭಾಗೀಯ ಮ್ಯಾಜಿಸ್ಟ್ರೇಟರು ನಿವಾರಿಸತಕ್ಕದ್ದೆಂದು ತೀರ್ಮಾನಿಸಿ, ವಿವರವಾದ ಆದೇಶದ ಮೂಲಕ ಮುಕ್ತಾಯಗೊಳಿಸಿದ್ದಾರೆ. ಈಗಿರುವ ವ್ಯವಹರಣೆಗಳಲ್ಲಿ ಪ್ರಶ್ನಿಸಬೇಕೆಂದು ಕೋರಿರುವುದು ಈ ಆದೇಶವನ್ನೇ ಆಗಿದೆ.

7. ಅರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರು, ಕೆಳಗಿನ (ಅಧೀನ) ನ್ಯಾಯಾಲಯದ ನಿರ್ಣಯವು ಆಧಾರವಿಲ್ಲದ್ದಾಗಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಕಡಂಗದ ಸ್ವರೂಪ ಮತ್ತು ಅದರ ಅಸ್ತಿತ್ವವನ್ನು ತಿಳಿಯಲಾಗಿದೆ ಮತ್ತು ಕಡಂಗಗಳು ಒಡೆಯರ ಕಾಲದಲ್ಲಿ ಅಸ್ತಿತ್ವದಲ್ಲಿದ್ದವು ಹಾಗೂ ಕಡಂಗವು ಸಾರ್ವಜನಿಕ ರಸ್ತೆಯಾಗಿರಲಿಲ್ಲ, ಆದರೆ ಯುದ್ಧದ ಕಂದಕಗಳಾಗಿ ಸೈನಿಕರು ಬಳಸಲು ಮೀಸಲಾಗಿತ್ತೆಂದು ಅಭಿಪ್ರಾಯಪಡಲಾಗಿದೆ ಎಂಬುದು ಅಸಿಸ್ಟೆಂಟ್ ಕಮೀಷನರ್ ಹಾಗೂ ಉಪವಿಭಾಗೀಯ ಮ್ಯಾಜಿಸ್ಟ್ರೇಟರು ಹೊರಡಿಸಿದ ಮೂಲ ಆದೇಶದಲ್ಲಿ ಕಂಡುಬರುತ್ತದೆ, ಹಾಗಿದ್ದರೂ, ಪುನರೀಕ್ಷಣಾ ನ್ಯಾಯಾಲಯವು, ಅಂತಹ ನಿರ್ಣಯಕ್ಕೆ ಯಾವುದೇ ಆಧಾರವಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದೆ. ಆದರೆ ಮತ್ತೊಂದು ಕಡೆಯಲ್ಲಿ, ಕರ್ನಾಟಕ ರಾಜ್ಯಪತ್ರ, ಕೊಡಗು ಜಿಲ್ಲೆ ಇದರ ಪ್ರತಿಯನ್ನು ಉಲ್ಲೇಖಿಸಿ, ಕಡಂಗವು ಸಾರ್ವಜನಿಕರು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗಲು ಇರುವುದಾಗಿದೆ ಮತ್ತು ಸಾಮಾನ್ಯವಾಗಿ, ಕಡಂಗದ ಎರಡೂ ಬದಿಗಳಲ್ಲಿ

ಕಾವಲುಗಾರರಿದ್ದು, ಅವುಗಳನ್ನು 'ಬಕ್ಕ ಬಾಗಿಲು' ಎಂದು ಕರೆಯುತ್ತಾರೆಂದು ಅಭಿಪ್ರಾಯ ವ್ಯಕ್ತಪಡಿಸಿದೆ. ಆದ್ದರಿಂದ, ಕಡಂಗಗಳು ಭೂಮಟ್ಟಕ್ಕಿಂತ ಕೆಳಗಿರುವ ದಾರಿಗಳಲ್ಲದೆ ಬೇರೇನಲ್ಲ ಮತ್ತು ಅವು ಸಾರ್ವಜನಿಕರಿಗೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಲು ಮೀಸಲಾಗಿವೆಯೇ ಹೊರತು, ಅದು ಸಾರ್ವಜನಿಕ ರಸ್ತೆಯಲ್ಲವೆಂದು ಉಪವಿಭಾಗೀಯ ಮ್ಯಾಜಿಸ್ಟ್ರೇಟರು ತೀರ್ಮಾನಿಸಿದಂತಲ್ಲವೆಂಬ ಅಭಿಪ್ರಾಯವನ್ನು ಇದು ರೂಪಿಸಿತ್ತು. ಆನಂತರ, 60/1 ಮತ್ತು 63/1 ಸರ್ವೆ ನಂಬರುಗಳನ್ನು ಹೊಂದಿರುವ ಜಮೀನುಗಳ ಮೇಲೆ ಯಾವುದೇ ಪ್ರತ್ಯೇಕ ಹಕ್ಕನ್ನು ಅರ್ಜಿದಾರರು ಕ್ಲೇಮು ಮಾಡಬಹುದೇ ಎಂಬುದನ್ನು ನಿರ್ಧರಿಸಲು, ಯಡೂರು ಗ್ರಾಮದ ಸದರಿ ಜಮೀನುಗಳ ನಡುವೆ ಕಡಂಗವಿದೆಯೇ ಎಂಬುದನ್ನು ತಿಳಿಯಲು ಪುನರೀಕ್ಷಣಾ ನ್ಯಾಯಾಲಯವು ಮುಂದುವರೆದಿದೆ ಮತ್ತು ಈ ಜಮೀನುಗಳ ನಡುವೆ ಕಡಂಗವಿರುವುದು ವಿವಾದಿತವಾಗಿಲ್ಲ ಮತ್ತು ಆದ್ದರಿಂದ ಅದರ ಮೇಲೆ ಅರ್ಜಿದಾರರು ಯಾವುದೇ ಪ್ರತ್ಯೇಕ ಹಕ್ಕನ್ನು ಕ್ಲೇಮು ಮಾಡಲಾಗದು ಮತ್ತು ಅದನ್ನು ಪ್ರತ್ಯರ್ಜಿದಾರ ಹಾಗೂ ಇತರರು ಕಾಲುದಾರಿಯಾಗಿ ಬಳಸಬಹುದು ಎಂದು ನಿರ್ಣಯಿಸಿದೆ ಹಾಗೂ ಯಾವುದಾದರೂ ಅಡೆತಡೆಯಿದ್ದಲ್ಲಿ, ಅಸಿಸ್ಟೆಂಟ್ ಕಮೀಷನರ್ ಹಾಗೂ ಉಪವಿಭಾಗೀಯ ಮ್ಯಾಜಿಸ್ಟ್ರೇಟರು ಅದನ್ನು ನಿವಾರಿಸುವರು ಎಂದು ಮುಕ್ತಾಯಗೊಳಿಸಿದೆ.

8. ಆದುದರಿಂದ, ಕಡಂಗಗಳ ಸ್ವರೂಪ ಮತ್ತು ಈ ಕಡಂಗಗಳ ಅಸ್ತಿತ್ವ ಹಾಗೂ ಈ ಕಡಂಗಗಳಿಂದ ಈಡೇರುತ್ತಿರುವ ಉದ್ದೇಶಗಳಿಗೆ ಸಂಬಂಧಿಸಿದಂತೆ ವಿಷಯ ಸಾಮಗ್ರಿಯನ್ನು ಹಾಜರುಪಡಿಸಲು ಅರ್ಜಿದಾರರ ಪರ ಹಾಜರಾದ ಅರ್ಜಿದಾರರನ್ನು ಕೋರಲಾಗಿದೆ. ಸದರಿ ಕಡಂಗವನ್ನು ಸಾರ್ವಜನಿಕ ಸ್ವತ್ತಾಗಿ ಪರಿಗಣಿಸಬಹುದಾಗಿದ್ದಾಗ್ಯೂ ಸಹ, ಕೆಲವು ಪ್ರದೇಶಗಳಲ್ಲಿ, ಅದು ಬಳಕೆ ತಪ್ಪಿಹೋಗಿ, ಖಾಸಗಿ ಸ್ವತ್ತುಗಳೊಂದಿಗೆ ಸೇರಿಹೋಗಿದೆ. ಇನ್ನು ಕೆಲವು ಪ್ರದೇಶಗಳಲ್ಲಿ ಕಡಂಗಗಳು ಖಾಸಗಿ ಸ್ವತ್ತುಗಳ ನಡುವೆ ಸ್ವಾಭಾವಿಕ ಗಡಿಗಳನ್ನು ರೂಪಿಸಿವೆ. ಇನ್ನಿತರ ಪ್ರದೇಶಗಳಲ್ಲಿ ಕಾಲುದಾರಿಯಾಗಿಯೂ ಬಳಸುತ್ತಿರಬಹುದು. ಆದರೆ, ಇದು ಪ್ರತಿಯೊಂದು ಪ್ರದೇಶದಲ್ಲಿ ಕಂಡುಬರುವ ಪ್ರತಿಯೊಂದು ಕಡಂಗವನ್ನು

ಓಡಾಡುವ ದಾರಿಯಾಗಿ ಬಳಸಬಹುದೆಂಬ ನಿರ್ಣಯಕ್ಕೆ ಕಾರಣವಾಗುವುದಿಲ್ಲ ಮತ್ತು ಸದರಿ ಪ್ರಕರಣದಲ್ಲಿ ಜಮೀನಿನ ಎರಡು ಬಾಬ್ತುಗಳ ನಡುವೆ ಇರುವ ಕಡಂಗವನ್ನು ಓಡಾಡುವ ದಾರಿಯನ್ನಾಗಿ ಬಳಸಿರುವುದಿಲ್ಲ. ಆದರೆ, ವಾಸ್ತವವಾಗಿ ಅದು ಅರ್ಜಿದಾರರ ಅಕ್ಕಪಕ್ಕದ ಜಮೀನುಗಳೊಂದಿಗೆ ವಿಲೀನವಾಗಿದೆ. ಅದು 50 ವರ್ಷಗಳಿಗಿಂತ ಹೆಚ್ಚು ಕಾಲದಿಂದ ಹಾಗೆ ಇರುವುದೆಂದು, ಅಸಿಸ್ಟೆಂಟ್ ಕಮೀಷನರ್‌ರು ನಡೆಸಿದ ಸ್ಥಳ ಪರಿಶೀಲನೆಯಿಂದ ತಿಳಿದುಬಂದಿರುವುದಾಗಿ ವಾದಿಸಲಾಗಿದೆ. ಅವರು ಕಡಂಗದಲ್ಲಿ ಯಾವುದೇ ಚಲನವಲನದ ಕುರುಹು ಇಲ್ಲದಿರುವುದನ್ನು ಗಮನಿಸಿದ್ದಾರೆ ಮತ್ತು ಯಾವುದೇ ದನಕರುಗಳ ಅಥವಾ ಜನರು ಕಡಂಗದಲ್ಲಿ ಓಡಾಡಿರುವ ಕುರುಹುಗಳಿಲ್ಲವೆಂದು ಅವರಿಗೆ ಕಂಡುಬಂದಿದೆ. ಕಡಂಗವು ಯಾರೇ ವ್ಯಕ್ತಿಯಿಂದ ಬಳಸಲಾಗುತ್ತಿಲ್ಲ. ಆದರೆ ಅಲ್ಲಿ ವ್ಯವಸಾಯ ಮಾಡಲಾಗುತ್ತಿದೆ ಎಂಬ ಇಂಥ ನಿರ್ದಿಷ್ಟ ನಿರ್ಣಯದ ಎದುರಾಗಿ, ಎಲ್ಲಾ ಕಡಂಗಗಳು ಸಾರ್ವಜನಿಕ ಸ್ವತ್ತಾಗಿವೆ ಮತ್ತು ಅವುಗಳನ್ನು ಕಾಲುದಾರಿಯಾಗಿ ಬಳಸಬಹುದೆಂಬ ಕೆಳಗಿನ (ಅಧೀನ) ನ್ಯಾಯಾಲಯದ ಸಾಮಾನ್ಯ ನಿರ್ಣಯವು ಸರಿಯಾದ ನಿರ್ಣಯವೆಂದು ಹೇಳಲಾಗುವುದಿಲ್ಲ.

ಅಸಿಸ್ಟೆಂಟ್ ಕಮೀಷನರ್ ಹಾಗೂ ಉಪವಿಭಾಗೀಯ ಮ್ಯಾಜಿಸ್ಟ್ರೇಟರು, ಕಡಂಗಗಳು ಪುರಾತನ ಯುದ್ಧ ಕಂದಕಗಳಾಗಿವೆ. ಅವುಗಳ ಬಳಕೆ ತಪ್ಪಿಹೋಗಿದೆ ಮತ್ತು ಗ್ರಾಮನಕ್ಷೆಯಲ್ಲಿ ಕಂಡುಬರುವಂತೆ, ಅವು ಹಲವಾರು ಜಮೀನುಗಳ ಮುಖಾಂತರ ಹಾದುಹೋಗಿರುವ ಕಂದಕಗಳ ಸರಣಿಯಾಗಿವೆಯೆಂಬ ನಿರ್ಣಯಕ್ಕೆ ಬಂದಿರುವುದನ್ನು ಗಮನಿಸಲಾಗಿದೆ. ಅಷ್ಟೇಅಲ್ಲದೆ, ಇಲ್ಲಿನ ವಸ್ತುವಿಷಯವಾಗಿರುವ ನಿರ್ದಿಷ್ಟ ಕಡಂಗವು ಸಂಬಂಧಪಡುವಷ್ಟರ ಮಟ್ಟಿಗೆ, ಇಲ್ಲಿ ಕಡಂಗವು ಅರ್ಜಿದಾರರ ಜಮೀನುಗಳ ಮುಖಾಂತರ ಮತ್ತು ಅವುಗಳ ನಡುವೆ ಹಾದು ಹೋಗಿರುತ್ತದೆಯೆಂದು ಮತ್ತು ಆ ಜಾಗದಲ್ಲಿ ಅರ್ಜಿದಾರರ ಜಮೀನಿನ ಭಾಗವಾಗಿ ಕಾಫಿ ಬೆಳೆಯ ಕೃಷಿ ಮಾಡಲಾಗಿದೆ ಹಾಗೂ ಅಲ್ಲಿ ಯಾವುದೇ ಕಾಲುದಾರಿಯ ಕುರುಹೇ ಇಲ್ಲವೆಂದು ಅವರಿಗೆ ಸ್ಥಳ ಪರಿಶೀಲನೆಯಿಂದ ಕಂಡುಬಂದಿದೆ. ಹಾಗಿದ್ದರೂ, ಪುನರೀಕ್ಷಣಾ

ನ್ಯಾಯಾಲಯವು, ಒಂದು ನಿರ್ದಿಷ್ಟ ಕಡಂಗವು ಕಾಲುದಾರಿಯಾಗಿ ಬಳಕೆಯಾಗುತ್ತಿರುವ ಮತ್ತು ಪ್ರತಿಯೊಂದು ಕಡಂಗವೂ ಸಹ ಕಾಲುದಾರಿಯನ್ನು ರೂಪಿಸುತ್ತದೆಯೆಂದು ಸಾಮಾನ್ಯೀಕರಿಸಿ ನೀಡಲಾದ ನಿರ್ಣಯವನ್ನು ಉಲ್ಲೇಖಿಸಿರುವ ಕರ್ನಾಟಕ ರಾಜ್ಯಪತ್ರದ ಪ್ರತಿಯ ಆಧಾರದ ಮೇಲೆ ಕೈಗೊಂಡ ಇಂಥ ನಿರ್ಣಯ ಸರಿಯಾದುದಲ್ಲವೆಂದು ಅದನ್ನು ತಳ್ಳಿಹಾಕಿರುತ್ತದೆ. ಯಾವುದೇ ಸಂದರ್ಭದಲ್ಲಿ, ಕೂರ್ಗ್ ಭೂಕಂದಾಯ ವಿನಿಯಮಗಳು, ಕರ್ನಾಟಕ ಕಂದಾಯ ಸಮೀಕ್ಷೆ ಕೈಪಿಡಿ ಹಾಗೂ ಮೈಸೂರು ಭೂಕಂದಾಯ ಸಂಹಿತೆಯ ಅಡಿಯಲ್ಲಿ ರಚಿಸಲಾದ ವಿನಿಯಮಗಳು ಕಡಂಗದ ಪರಿಭಾಷೆಯನ್ನು ಒಳಗೊಂಡಿರುವುದಿಲ್ಲ.

9. ಅರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರು, ಇಂಟರ್‌ನೆಟ್‌ನಲ್ಲಿ ಲಭ್ಯವಿರುವ ಉಚಿತ ಎನ್‌ಸೈಕ್ಲೋಪಿಡಿಯ ಆದ ವಿಕಿಪಿಡಿಯಾದಿಂದ ಉದ್ಧೃತ ಭಾಗವನ್ನು ಹಾಜರುಪಡಿಸಿದ್ದು, ಅದರಲ್ಲಿ ಕಡಂಗವು ಕೊಡಗಿನ ಪುರಾತನ ಅವಶೇಷವಾಗಿರುವುದಾಗಿಯೂ ಮತ್ತು ಅವು 1.5 ಮೀಟರ್‌ನಿಂದ 7.5 ಮೀಟರ್ ಎತ್ತರವಿರುವ ಹಾಗೂ 3 ಮೀಟರ್ ಅಗಲ ಹಾಗೂ 2 ಮೀಟರ್ ಅಥವಾ 3 ಮೀಟರ್ ಅಗಲದ ಕಂದಕಗಳನ್ನು ಹೊಂದಿರುವ ಹಂಗಾಮಿ ಕೋಟೆಕೊತ್ತಲ ಅಥವಾ ಯುದ್ಧಕಂದಕಗಳಾಗಿರುವುದಾಗಿ ಉಲ್ಲೇಖಿಸಲಾಗಿದೆ. ಅವು ಒಂಭತ್ತನೇ ಮತ್ತು ಹತ್ತನೇ ಶತಮಾನಗಳ ಶಿಲಾಶಾಸನಗಳಲ್ಲಿ ಕೆತ್ತಲ್ಪಟ್ಟಿವೆಯೆಂಬುದನ್ನು ಸಹ ಗಮನಿಸಲಾಗಿದೆ. ಸುಮಾರು ಕ್ರಿ.ಶ. (A.D) 800ರಿಂದ ಕ್ರಿ.ಶ. (A.D) 900ರ ಕಾಲದ ಶಿಲಾಶಾಸನಗಳು ಕೊಡವರು ಮಾಡಿದ ಕಡಂಗಗಳು ಅಥವಾ ರಕ್ಷಣಾ ನಿರ್ಮಾಣಗಳನ್ನು ಕುರಿತು ಹೇಳುತ್ತವೆ ಮತ್ತು ಕೊಡವರದು ವೀರಯೋಧರ ಜನಾಂಗವಾಗಿತ್ತು ಹಾಗೂ ಹಲವಾರು ಶತಮಾನಗಳ ಕಾಲ ಕದಂಬರು, ಗಂಗರು, ಚೋಳರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು ಮತ್ತು ವಿಜಯನಗರದ ರಾಯರಂಥ ಅನೇಕ ದಕ್ಷಿಣ ಭಾರತದ ರಾಜಮನೆತನಗಳು ಕೊಡಗನ್ನು ಆಳಿದ್ದಾರೆಂಬುದನ್ನು ಗಮನಿಸಲಾಗಿದೆ. ಆದ್ದರಿಂದ, ಈ ಕಂದಕಗಳು ವಿಸ್ತಾರವಾದ ಪ್ರದೇಶಗಳಾದ್ಯಂತ ಹರಡಿಕೊಂಡಿದ್ದಲ್ಲಿ ಮತ್ತು ಕಾಲಸರಿದಂತೆ, ಖಾಸಗಿ ಭೂಮಾಲೀಕರು ಕಡಂಗಗಳನ್ನೊಳಗೊಂಡ ಭೂಮಿಯ ಸಾಗುವಳಿ ಮಾಡಿದ್ದರು.

ಕೆಲವು ಪ್ರದೇಶಗಳಲ್ಲಿ ಅವು ಭೂಮಿಯ ಎರಡು ಬಾಬ್ತುಗಳ ನಡುವೆ ಗಡಿಯನ್ನು ರೂಪಿಸಿರುವ ಅಥವಾ ಕೆಲವು ಪ್ರದೇಶಗಳಲ್ಲಿ ಕಾಲುದಾರಿಯಾಗಿ ಬಳಕೆಯಾಗಿರುವ ಹಾಗೂ ಇನ್ನಿತರ ಸಂದರ್ಭಗಳಲ್ಲಿ, ಸದರಿ ಪ್ರಕರಣದಲ್ಲಿರುವಂತೆ, ಕಡಂಗಗಳು ಹಾದುಹೋಗಿರುವ ಜಮೀನುಗಳೊಂದಿಗೆ ವಿಲೀನವಾಗಿದ್ದು, ಸಹಜವಾಗಿ, ಅಲ್ಲಿ ಕೃಷಿ ಮಾಡಿರುವ ಸಾಧ್ಯತೆಯಿದೆ. ಇಂದು, ಅದು ವಾಸ್ತವಿಕವಾಗಿ ಬಳಕೆಯಲ್ಲಿಲ್ಲದ ಕಾರಣ ಕಡಂಗಗಳ ಮೇಲೆ ಯಾವುದೇ ಪ್ರತ್ಯೇಕ ಹಕ್ಕನ್ನು ಚಲಾಯಿಸುವುದು ಅಥವಾ ಖಾಸಗಿ ಪಕ್ಷಕಾರರು ಅದರ ಮೇಲೆ ಯಾವುದೇ ಆಧಿಕಾರವನ್ನು ಚಲಾಯಿಸಕೂಡದೆಂದು ಒತ್ತಾಯಿಸುವುದು ಸೂಕ್ತವಲ್ಲವೆಂದು ಸರ್ಕಾರವು ಭಾವಿಸಿರುವ ಸಾಧ್ಯತೆಯಿದೆ. ಯಾವುದೇ ಸಂದರ್ಭದಲ್ಲಿ ನಿರ್ದಿಷ್ಟ ಕಡಂಗವು, ಅದು ಅಸ್ತಿತ್ವದಲ್ಲಿರುವ ಬಗ್ಗೆ ಯಾವುದೇ ವಿವಾದವನ್ನು ಹೊಂದಿರದೆ ಮತ್ತು ಅರ್ಜಿದಾರರಿಗೆ ಸೇರಿರುವ ಭೂಮಿಯ ಎರಡು ಬಾಬ್ತುಗಳ ನಡುವೆ ಹಾದುಹೋಗಿದ್ದು, ಅದು ಸಾರ್ವಜನಿಕರ ಕಾಲುದಾರಿಯಾಗಿ ಬಳಕೆಯಾಗಿತ್ತೆಂಬ ಪ್ರತ್ಯರ್ಜಿದಾರರ ಕ್ಲೇಮು ವಾಸ್ತವವಲ್ಲವೆಂದು ಅಸಿಸ್ಟೆಂಟ್ ಕಮೀಷನರ್‌ರು ನಡೆಸಿದ ಸ್ಥಳ ಪರಿಶೀಲನೆಯಿಂದ ಕಂಡುಬಂದಿರುತ್ತದೆ. ಹಾಗಿದ್ದರೂ, ಪುನರೀಕ್ಷಣಾ ನ್ಯಾಯಾಲಯವು ಪ್ರತ್ಯರ್ಜಿದಾರರು ಮಾಡಿದ ಸಮರ್ಥನೆಗಳ ಆಧಾರದ ಮೇಲೆ ಈ ನಿರ್ಣಯವನ್ನು ಕೇವಲ ವಿಪರ್ಯಯಗೊಳಿಸಿದೆ. ಆದ್ದರಿಂದ ನಿರ್ದಿಷ್ಟ ಕಡಂಗಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಇದರಲ್ಲಿ ಯಾವುದೇ ಸಾರ್ವಜನಿಕ ಹಿತಾಸಕ್ತಿ ಇಲ್ಲವೆಂದು ಕಂಡುಬಂದಿದೆ ಮತ್ತು ಇದು ಪ್ರತ್ಯರ್ಜಿದಾರರ ವೈಯಕ್ತಿಕ ಕ್ಲೇಮಾಗಿದ್ದು, ಪ್ರತ್ಯರ್ಜಿದಾರರನ್ನು ಹೊರತುಪಡಿಸಿ, ಗ್ರಾಮದ ಇತರರು ಸಹ ಕಡಂಗವನ್ನು ಬಳಸುತ್ತಿದ್ದರೆಂದು ಪ್ರಾಸಂಗಿಕವಾಗಿ ಹೇಳುವಾಗ ಮತ್ತು ಅಸಿಸ್ಟೆಂಟ್ ಕಮೀಷನರ್‌ರವರು ತೆಗೆದುಕೊಂಡ ವಾಸ್ತವ ಸಂಗತಿಯ ನಿರ್ಣಯವನ್ನು ಪರಿಗಣಿಸಿದಲ್ಲಿ, ದಂಡ ಪ್ರಕ್ರಿಯಾ ಸಂಹಿತೆ, 1973ರ ಪ್ರಕರಣ 133ನ್ನು, ಪ್ರತ್ಯರ್ಜಿದಾರರ ವೈಯಕ್ತಿಕ ಸ್ವರೂಪದ ಪ್ರಕರಣವನ್ನು ಸುಸ್ಥಾಪಿಸಲು ಕೋರಲಾಗಿದೆಯೆಂದು ಹೇಳಲಾಗುವುದಿಲ್ಲ. ಪ್ರತ್ಯರ್ಜಿದಾರನು ಕಡಂಗದ ಮೂಲಕ ಹಾದುಹೋಗುವ ದಾರಿಯ ಹಕ್ಕನ್ನು ಚಲಾಯಿಸಲು ಕೋರಿದ್ದಲ್ಲಿ, ಅವನು ಅಂಥ ಹಕ್ಕಿಗೆ ಸಂಬಂಧಿಸಿದ ಘೋಷಣೆಯನ್ನು ಕೋರುವಲ್ಲಿ, ರಾಜ್ಯ ಸರ್ಕಾರದ ಹಾಗೂ ಈಗಿನ ಅರ್ಜಿದಾರರ ವಿರುದ್ಧ ಸೂಕ್ತ ವ್ಯವಹರಣೆಗಳನ್ನು ದಾಖಲಿಸುವ ಅಗತ್ಯತೆಯಿದೆ. ಆದುದರಿಂದ

ಅರ್ಜಿದಾರರ ಭೂಮಿಯ ಎರಡು ಬಾಬ್ತುಗಳ ನಡುವೆ ಇರುವ ಕಡಂಗವು ಸಾರ್ವಜನಿಕ ದಾರಿ ಮತ್ತು ವಾಹನಗಳು ಚಲಿಸುವ ರಸ್ತೆ ಎಂಬ ಕೆಳಗಿನ (ಅಧೀನ) ನ್ಯಾಯಾಲಯದ ನಿರ್ಣಯವು, ಅಸಿಸ್ಟೆಂಟ್ ಕಮೀಷನರ್‌ರು ನಡೆಸಿದ ಸ್ಥಳ ಪರಿಶೀಲನೆಯ ಆಧಾರದ ಮೇಲೆ ಕೈಗೊಂಡ, ವಾಸ್ತವ ಸಂಗತಿಯ ನಿರ್ಣಯಗಳಿಗೆ ನಿಶ್ಚಿತವಾಗಿ ವಿರುದ್ಧವಾಗಿದೆ.

ತದನುಸಾರವಾಗಿ, ಅರ್ಜಿಯನ್ನು ಪುರಸ್ಕರಿಸಲಾಗಿದೆ. ಅಧೀನ ನ್ಯಾಯಾಲಯದ ಪ್ರಶ್ನಿತ ಆದೇಶವನ್ನು ತಳ್ಳಿಹಾಕಲಾಗಿದೆ. ಮೊದಲ ಸಂದರ್ಭದಲ್ಲಿ ಅಸಿಸ್ಟೆಂಟ್ ಕಮೀಷನರ್ ಹೊರಡಿಸಿದ ಆದೇಶವನ್ನು ಸಮರ್ಥಿಸಲಾಗಿದೆ.